## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

ಪಿಡಬ್ಲ್ಯೂ:7

ಸ್ಪೆಷಲ್ ಕೇಸ್ ಸಂಖ್ಯೆ: 510/23 ಸಿಡಬ್ಲ್ಯೂ:10

ಸಾಕ್ಷಿದಾರರ ಹೆಸರು : ಗೋಪಾಲ ಕೃಷ್ಣ

ತಂದೆ ಹೆಸರು : ಕೃಷ್ಣ

ವಯಸ್ಸು : 44

ವೃತ್ತಿ : ಕೂಲಿ

ವಾಸ : ಸೇನಾಪುರ ಗ್ರಾಮ

ದಿನಾಂಕ: 28-04-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ

ನಾನು ಈ ಹಿಂದೆ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಟ್ರಸ್ಟಿಯಾಗಿದ್ದೆ. ನಾಡಗುಡ್ಡೆಯಂಗಡಿಯಲ್ಲಿರುವ ಪ್ರಸನ್ನ ಗಣಪತಿ ದೇವಸ್ಥಾನದ ಗಣೇಶೋತ್ಸವ ಸಮಿತಿಯ ಅಧ್ಯಕ್ಷ ಸಹಾ ಆಗಿದ್ದೆ. ನನಗೆ ಈ ಪ್ರಕರಣದ ಆರೋಪಿತರ ಪರಿಚಯ ಇದೆ. ಚಾಸಾ.1 ರಿಂದ 5 ರವರ ಪರಿಚಯ ಇದೆ. ದಿನಾಂಕ:20-9-2023 ರಂದು ನಮ್ಮ ಗಣಪತಿ ಮೂರ್ತಿ ವಿಸರ್ಜನೆ ಮೆರವಣಿಗೆಯಲ್ಲಿ ಆರೋಪಿಗಳಿಗೂ ಹಾಗೂ ಚಾಸಾ.1 ಮತ್ತು 4 ರವರಿಗೂ ಗಲಾಟೆ ಆದ ವಿಚಾರ ನನಗೆ ಗೊತ್ತಿಲ್ಲ. ನಾನು ಸದ್ರಿಯವರ ನಡುವೆ ಯಾವುದೇ ರಾಜೀ ಪಂಚ್ಯಾತಿಕೆ ಮಾಡಿಸಿಲ್ಲ. ಈ ಪ್ರಕರಣದ ಆರೋಪಿಗಳು ಚಾಸಾ.1 ರಿಂದ 4 ರವರಿಗೆ ಚಂದ್ರಿಕಾ ಬಾರ್ ಬಳಿ ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಪೋಲೀಸರು ಈ ಪ್ರಕರಣದಲ್ಲಿ ನನ್ನನ್ನು ವಿಚಾರಿಸಿಲ್ಲ. ಪೋಲೀಸರು ಚಂದ್ರಿಕಾ ಬಾರ್ ನ ಎದುರುಗಡೆ ಅಳವಡಿಸಿದ ಸಿಸಿ ಟಿವಿ ದೃಶ್ಯಾವಳಿಗಳನ್ನು ವಶಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದೆ. ಸದ್ರಿ ಮಹಜರನ್ನು ನಿಪಿ-20 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-20 ಎ ಎಂದು ಗುರುತಿಸಲಾಯಿತು. ನಿಪಿ-20 ಕ್ಕೆ ನಾನು

ಎಲ್ಲಿ ಯಾವಾಗ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಅದರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಡಿವಿಡಿಯನ್ನು ವಶಪಡಿಸಿಕೊಂಡಿಲ್ಲ. ಈಗ ನನಗೆ ತೋರಿಸಿದ ಎರಡು ಫೋಟೋಗಳಲ್ಲಿ ನಾನು ಇದ್ದಿರುತ್ತೇನೆ. ಸದ್ರಿ ಎರಡು ಫೋಟೋಗಳನ್ನು ಒಟ್ಟಾಗಿ ನಿಪಿ-21 ಎಂದು ಗುರುತಿಸಲಾಯಿತು. ಸದ್ರಿ ಫೋಟೋಗಳನ್ನು ಎಲ್ಲಿ ಯಾವಾಗ ತೆಗೆಯಲಾಯಿತು ಮತ್ತು ಯಾವ ಕಾರಣಕ್ಕಾಗಿ ತೆಗೆಯಲಾಯಿತು ಎಂದು ನನಗೆ ಗೊತ್ತಿಲ್ಲ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ</u> ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ20-09-2023 ರಂದು ಗುಡ್ಡೆಯಂಗಡಿಯಲ್ಲಿರುವ ಗಣಪತಿ ದೇವಸ್ಥಾನದ ವಠಾರದಲ್ಲಿ ಗಣೇಶೋತ್ಸವ ಸೇವಾ ಸಮಿತಿಯಿಂದ ಗಣಪತಿ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆಯಲ್ಲಿ 2, 3 ಮತ್ತು 5 ನೇ ಆರೋಪಿತರು ಚಾಸಾ.4 ರವರಲ್ಲಿ ಗಲಾಟೆ ಮಾಡಿದ್ದಾರೆ ಎಂದು ಅದೇ ದಿನ ಚಾಸಾ.1 ಮತ್ತು 4 ರವರು ಸಮಿತಿಯ ಮುಂದೆ ಮೌಖಿಕವಾಗಿ ದೂರು ನೀಡಿರುತ್ತಾರೆ ಎಂದರೆ ಸರಿ ಅಲ್ಲಾ.ಅದೇ ಸಮಯಕ್ಕೆ ದೇವಸ್ಥಾನಕ್ಕೆ 2, 3 ಮತ್ತು 5 ನೇ ಆರೋಪಿಗಳು ಬಂದಿರುತ್ತಾರೆ ಎಂದರೆ ಸರಿ ಅಲ್ಲಾ. ನಾನು ಹಾಗೂ ಸಮಿತಿಯವರು ಎರಡೂ ಕಡೆಯವರ ನಡುವೆ ರಾಜೀ ಪಂಚ್ಯಾತಿ ಮಾಡಿಸಿ ಎರಡೂ ಕಡೆಯವರು ಪರಸ್ಪರ ಕ್ಷಮೆ ಕೇಳಿಸಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲಾ. ಆ ದ್ವೇಷದ ಹಿನ್ನಲೆಯಲ್ಲಿ 21-09-2023 ರಂದು ರಾತ್ರಿ 10.30 ಗಂಟೆಗೆ ಚಂದ್ರಿಕಾ ಬಾರ್ ಎದುರುಗಡೆ ಈ ಪ್ರಕರಣದ ಆರೋಪಿತರು ಚಾಸಾ.1 ರಿಂದ 5 ರವರಿಗೆ ದೊಣ್ಣೆ ಮತ್ತು ಕೈಗಳಿಂದ ಹಲ್ಲೆ ಮಾಡಿ ಜಾತಿ ನಿಂದನೆ ಮಾಡಿರುತ್ತಾರೆ ಎಂದು ನನಗೆ ನಂತರ ತಿಳಿಯಿತು ಎಂದರೆ ಸರಿ ಅಲ್ಲಾ. ಈ ಬಗ್ಗೆ ನಾನು ದಿನಾಂಕಃ24-09-2023 ರಂದು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-22 ಎಂದು ಗುರುತಿಸಲಾಯಿತು.

ದಿನಾಂಕಃ25-09-2023 ರಂದು ಗುಡ್ಡೆಯಂಗಡಿಯಲ್ಲಿರುವ ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ತನಿಖಾಧಿಕಾರಿಯು ಸಿಸಿ ಟಿವಿ ಯನ್ನು ಪರಿಶೀಲಿಸಲು ಬಂದಾಗ ನಾನು

ಸಹಾ ಹಾಜರಿದ್ದೆ ಎಂದರೆ ಸರಿ ಅಲ್ಲಾ. ಸದ್ರಿ ಹೋಟೇಲಿನ ಮಾಲೀಕರಾದ ಚಾಸಾ.11 ಮತ್ತು ಸಿಸಿ ಟಿವಿ ತಾಂತ್ರಿಕ ತಜ್ಞರಾದ ಚಾಸಾ.18 ನೇಯವರು ಹಾಜರಿದ್ದರು ಎಂದರೆ ಸರಿ ಅಲ್ಲಾ. ಸದ್ರಿ ಹೋಟೇಲಿಗೆ ಅಳವಡಿಸಿದ ಸಿಸಿ ಟಿವಿಯಲ್ಲಿ ದಿಃ20-09-2023 ರ ರಾತ್ರಿಯ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಈ ಪ್ರಕರಣದ ಆರೋಪಿತರು ಚಾಸಾ.1 ರಿಂದ 5 ರವರಿಗೆ ಹಲ್ಲೆ ಮಾಡುತ್ತಿರುವ ದೃಶ್ಯಾವಳಿಗಳು ಕಂಡು ಬಂದಿದೆ ಎಂದರೆ ಸರಿ ಅಲ್ಲಾ. ಸದ್ರಿ ದೃಶ್ಯಾವಳಿಯನ್ನು ಡಿವಿಡಿಗೆ ಕಾಪಿ ಮಾಡಿ ಸದ್ರಿ ಡಿವಿಡಿ ಯನ್ನು ನಿಪಿ-20 ಮಹಜರು ಅಡಿಯಲ್ಲಿ ವಶಪಡಿಸಿಕೊಂಡು ಅದೇ ಸ್ಥಳದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ ಅಲ್ಲಾ. ಹಾಗೂ ಅದೇ ಸಮಯ ನಿಪಿ-21 ರಂತೆ ಪೋಟೋ ತೆಗೆಯಲಾಗಿರುತ್ತದೆ ಎಂದರೆ ಸರಿ ಅಲ್ಲಾ.

ಘಟನೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಾ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

ಪಾಟೀ ಸವಾಲುಃ 1 ರಿಂದ 7 ನೇ ಆರೋಪಿ ಪರ ಶ್ರೀ ಕೆ ಪಿ ಕೆ ಎಸ್ ವಕೀಲರಿಂದ ಹಾಜರಿದ್ದು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ